

ಮತ್ತೆ ಹೇಳಿದಳು. ಇದ್ದುದರಲ್ಲೇ ಎಲ್ಲರನ್ನೂ ಸಂತುಷ್ಟಗೊಳಿಸಿದೆ ಎಂಬ ಭ್ರಮೆಯಲ್ಲಿ ತೇಲುತ್ತಿದ್ದ ಯಜಮಾನ ಅವಳ ಮಾತಿಗೆ ಕಿವಿಗೊಡಲಿಲ್ಲ.

ಕೆಲವು ದಿನಗಳ ನಂತರ ಮತ್ತೊಂದು ಸಮಾರಂಭ ನಡೆಯಿತು. ಮತ್ತೆ ಗೃಹಿಣಿ ಎಚ್ಚರಿಸಿದಳು. ಯಜಮಾನನದು ಅದೇ ಭ್ರಮೆ, ಅಸಡ್ಡೆ. ಹಿಂದಿನ ಬಾರಿ ಆಗಿದ್ದ ಆತುರ, ತರಾತುರಿ ಎಲ್ಲವನ್ನೂ ಮರೆತಿದ್ದ. ಈ ಬಾರಿ ಮನೆಗೆ ಜನಸ್ತೋಮವೇ ಹರಿದು ಬಂದಿತ್ತು. ಎಲ್ಲರೂ ಹಸಿದು ಬಂದಿದ್ದರು. ಮನೆಯಲ್ಲಿ ಇದ್ದದ್ದನ್ನೆಲ್ಲ ಸೇರಿಸಿದರೂ ಬಂದವರಲ್ಲಿ ಅರ್ಧ ಜನರಿಗೂ ಉಣಬಡಿಸಲಾಗಲಿಲ್ಲ. ಒಬ್ಬಳೇ ಇದ್ದರೂ ಎಷ್ಟು ಜನರಿಗೆ ಬೇಕಾದರೂ ಬೇಯಿಸಿ ಹಾಕಬಲ್ಲ ಸಾಮರ್ಥ್ಯ ಹಾಗೂ ಛಲ ಅವಳದ್ದು. ಏನಿದ್ದರೇನಂತೆ, ಮೂಲ ಸಾಮಗ್ರಿಗಳೇ ಇಲ್ಲದಾಗ ಅವಳ ಅಷ್ಟು ಶ್ರಮ ವ್ಯರ್ಥ. ಮನೆಗೆ ಬಂದ ಅತಿಥಿಗಳು ಕೆಂಡಾಮಂಡಲ. ಮನೆಬಾಗಿಲಿಗೆ ಬಂದವರಿಗೆ ಒಂದು ತುತ್ತು ಅನ್ನ ಹಾಕಲಾಗದವಳು ಎಂದು ಹಿಡಿಶಾಪ ಹಾಕಿದರು. ಯಜಮಾನ ಮಾತ್ರ ಏನೂ ಗೊತ್ತಿಲ್ಲದವನಂತೆ ಗೃಹಿಣಿಯ ಕಡೆಗೇ ಬೆರಳು ಮಾಡಿದ. ಎಲ್ಲವೂ ತಿಳಿದಿದ್ದರೂ ಹಿರಿಯರು ಮೌನ ತಾಳಿದರು. ತನ್ನದಲ್ಲದ ತಪ್ಪಿಗೆ ಗೃಹಿಣಿ ಬೈಗುಳ ನಿಂದನೆಗಳನ್ನು ಅನುಭವಿಸಿದಳು.

ಇಲ್ಲಿ ಮನೆಯ ಯಜಮಾನ ನಮ್ಮ ಸರ್ಕಾರ, ರಾಜಕಾರಣಿಗಳು ಹಾಗೂ ಉನ್ನತ ಅಧಿಕಾರಿಗಳು. ಗೃಹಿಣಿ ಆರೋಗ್ಯ ವ್ಯವಸ್ಥೆ ಹಾಗೂ ವೈದ್ಯ ಸಿಬ್ಬಂದಿ, ಕರೆಯದೆ ಬಂದ ಅತಿಥಿಗಳು ಕೊರೊನಾ ಕೇಸುಗಳು. ಹಿರಿಯರು ನಮ್ಮ ಸಮಾಜದ ಬುದ್ಧಿಜೀವಿಗಳು.ಈ ಪಾತ್ರಗಳೊಂದಿಗೆ ಕಥೆಯನ್ನು ಮತ್ತೊಮ್ಮೆ ಓದಿ, ವಾಸ್ತವ ಅರ್ಥವಾಗುತ್ತದೆ.

ಆಸ್ಪತ್ರೆಯಲ್ಲಿ ಸಾವು ನೋವುಗಳು ಸಾಕಷ್ಟು ಕಣ್ಣಿಗೆ ಬೀಳುತ್ತವೆ. ಹತ್ತಿರದವರನ್ನು ಕಳೆದುಕೊಂಡಾಗ ಮನಸ್ಸಿಗೆ ಬಹಳ ನೋವುಂಟಾಗುವುದು ಸಹಜ. ಆಗ ಮನಸ್ಸು ಸ್ಥಿರತೆಯನ್ನು ಕಳೆದುಕೊಳ್ಳುತ್ತದೆ. ರೋಗಾವಸ್ಥೆ, ರೋಗದ ತೀವ್ರತೆ ತಿಳಿದ ಮೇಲೆಯೂ ಹೆಚ್ಚಿನ ಬಾರಿ ರೋಗಿಯ ಸಂಬಂಧಿಕರು, ತಮ್ಮವರನ್ನು ಕಳೆದುಕೊಂಡಿದ್ದೇವೆ ಎಂಬುದನ್ನು ಒಪ್ಪುವ ಮನಸ್ಥಿತಿಯಲ್ಲಿ ಇರುವುದಿಲ್ಲ. ಅವರನ್ನು ಸಮಾಧಾನಪಡಿಸಿ, ಬಹಳಷ್ಟು ಸಮಾಲೋಚನೆಯ ನಂತರ ಸಹಜ ಸ್ಥಿತಿಗೆ ಮರಳುತ್ತಾರೆ. ಕೆಲವೊಬ್ಬರು ತಮ್ಮ ಹತಾಶೆಯನ್ನು ವೈದ್ಯ ಸಿಬ್ಬಂದಿಯ ಮೇಲೆ ಸಿಟ್ಟಿನ ರೂಪದಲ್ಲಿ ತೋರಿಸುತ್ತಾರೆ. ನಮ್ಮಿಂದ ನೀಡಬಹುದಾದ ಉತ್ತಮ ಚಿಕಿತ್ಸೆಯನ್ನು ನೀಡಿ, ನಮ್ಮ ಕಡೆಯಿಂದ ಯಾವುದೇ ತಪ್ಪಿಲ್ಲದಿದ್ದರೂ ಕೆಲವೊಮ್ಮೆ ಅಪವಾದಗಳು ಬರುತ್ತವೆ. ತಕ್ಷಣಕ್ಕೆ ನಾವು ಅದಕ್ಕೆ ಪ್ರತಿಕ್ರಿಯಿಸುವುದಿಲ್ಲ. ಏಕೆಂದರೆ ಮೃತರ ಸಂಬಂಧಿಕರ ಹತಾಶೆ ಹಾಗೂ ನೋವನ್ನು ನಾವು ಅರ್ಥ ಮಾಡಿಕೊಳ್ಳಬಲ್ಲೆವು. ಆದರೆ, ನಮ್ಮ ಮನಸ್ಸನ್ನು ಅರ್ಥ ಮಾಡಿಕೊಳ್ಳುವವರು ಯಾರು?

ರೋಗದ ತೀವ್ರ ಸಾಂಕ್ರಾಮಿಕತೆಯಿಂದ ರೋಗಿಗಳ ಸಂಬಂಧಿಕರನ್ನು ವಾರ್ಡ್‌ಗಳಲ್ಲಿ ಬಿಡುವಂತಿಲ್ಲ. ತುಂಬಿತುಳುಕುತ್ತಿರುವ ಐಸಿಯು ವಾರ್ಡ್‌ಗಳು, ಅತಿ ಕಡಿಮೆ ಸಿಬ್ಬಂದಿ, ಮೂಲಸೌಕರ್ಯಗಳ ಕೊರತೆ,ತೀವ್ರಸ್ವರೂಪದ ಕಾಯಿಲೆ – ಇವೆಲ್ಲವೂ ರೋಗಿ, ವೈದ್ಯ ಹಾಗೂ ರೋಗಿಯ ಸಂಬಂಧಿಕರ ನಡುವೆ ಬಹಳಷ್ಟು ಅಂತರ ಸೃಷ್ಟಿಸಿವೆ. ಕಾಯಿಲೆಯ ಒದ್ದಾಟ, ಒಂಟಿತನ, ತನ್ನವರು ಜೊತೆಗಿಲ್ಲವೆಂಬ ನೋವು ರೋಗಿಗಾದರೆ, ಒಳಗೆ ಏನಾಗುತ್ತಿದೆಯೋ, ತನ್ನವರ ಸ್ಥಿತಿ ಹೇಗಿದೆಯೋ ಎಂಬ ಆತಂಕ ಸಂಬಂಧಿಕರಿಗೆ. ಇದರ ನಡುವೆ ಇವರಿಬ್ಬರ ನೋವು ಆತಂಕಗಳನ್ನು ದೂರವಾಗಿಸಲು ಹಗಲಿರುಳು ಶ್ರಮಪಟ್ಟು ಕಾರ್ಯನಿರ್ವಹಿಸುತ್ತಿರುವ ವೈದ್ಯ ಸಿಬ್ಬಂದಿ.

ಕೋವಿಡ್ ಐಸಿಯು ಹಾಗೂ ವಾರ್ಡ್‌ಗಳು ಯುದ್ಧಭೂಮಿಯೇ ಸರಿ. ಅಲ್ಲಿ ಪ್ರತಿಕ್ಷಣವೂ ಜೀವ ಉಳಿಸುವ ಹೋರಾಟ ನಡೆಯುತ್ತಲೇ ಇರುತ್ತದೆ. ಈಗ ಸ್ವಲ್ಪ ಹೊತ್ತಿನ ಮುಂಚೆ ಆರಾಮಾಗಿದ್ದ ರೋಗಿ ಹಠಾತ್ತನೆ ಕುಸಿದುಬಿಡುತ್ತಾನೆ. ತುರ್ತು ಚಿಕಿತ್ಸೆಯ ನಂತರ ಕೆಲವೊಬ್ಬರು ಚೇತರಿಸಿಕೊಂಡರೆ, ಕೆಲವರು ಚಿಕಿತ್ಸೆ ಫಲಿಸದೆ ಕ್ಷಣಮಾತ್ರದಲ್ಲಿ ಇಹಲೋಕವನ್ನು ತ್ಯಜಿಸಿರುತ್ತಾರೆ. ಎಲ್ಲವೂ ಸರಿಯಾಗಿದ್ದು ಒಮ್ಮೆಗೇ ತೀವ್ರ ಹೃದಯಾಘಾತದಿಂದ ಸಾವನ್ನಪ್ಪುವ ಘಟನೆಗಳನ್ನು ನಾವು ದಿನನಿತ್ಯದ ಜೀವನದಲ್ಲಿ ನೋಡುತ್ತೇವೆ. ಉದಾಹರಣೆಗೆ, ಡಾಕ್ಟರ್ ಎಪಿಜೆ ಅಬ್ದುಲ್ ಕಲಾಂರವರು ಶಿಲ್ಲಾಂಗ್‌ನಲ್ಲಿ ಭಾಷಣ ಮಾಡುತ್ತಿರುವಾಗ ವೇದಿಕೆಯ ಮೇಲೆಯೇ ಕುಸಿದು ಬಿದ್ದು ನಮ್ಮನ್ನೆಲ್ಲ ಅಗಲಿದರು. ಹೀಗೆ ಅಚಾನಕ್ ತೀವ್ರ ಹೃದಯಾಘಾತ, ಉಸಿರು ನಿಲ್ಲುವುದು ಕೋವಿಡ್ ರೋಗಿಗಳಲ್ಲಿ ಹೆಚ್ಚಿನ